ಈ ಲೇಖನದ ವಿಷಯಾನುಕ್ರಮಣಿಕೆ


**ಪುರುಷೋತ್ತಮಮಾಸದ ದಾನಗಳು 2**

**ಅಪೂಪದಾನ 3**

**ದಾನ ಮಾಡುವ ಸಾಮರ್ಥ್ಯ ಕಿಂಚಿತ್ತೂ ಇಲ್ಲವಾದಾಗ 6**

**ಅಪೂಪದಾನದ ಕುರಿತು ತಿರಸ್ಕಾರ ಬೇಡ 7**

**ದಾನ ಮಾಡುವ ಮುನ್ನ ಕೆಲವು ಎಚ್ಚರಗಳು 10**

**ಮರೆಯಬಾರದ ಒಂದು ಮಾತು. 14**

**ದೀಪದಾನ 17**

**ದೇವರ ಹಾವು ಏಣಿ ಆಟ 24**

**ಶ್ರೀಮದ್ ಭಾಗವತದಾನ 26**

**ಉಪನ್ಯಾಸಗಳ ಲಿಂಕುಗಳು 39**

## ಪುರುಷೋತ್ತಮಮಾಸದ ದಾನಗಳು

ಶಾಸ್ತ್ರದಲ್ಲಿ ವಿಹಿತವಾದ ಎಲ್ಲ ದಾನಗಳನ್ನೂ (ಕಾಲದ ವಿಶೇಷ ವಿಧಿಯಿರುವ ಕನ್ಯಾದಾನ ಮುಂತಾದ ದಾನಗಳನ್ನು ಹೊರತು ಪಡಿಸಿ) ಪುರುಷೋತ್ತಮಮಾಸದಲ್ಲಿ ಅನುಷ್ಠಾನ ಮಾಡಬಹುದು. ಉಳಿದ ಸಂದರ್ಭಗಳಲ್ಲಿ ಮಾಡಿದ ದಾನಕ್ಕಿಂತಲೂ ಪುರುಷೋತ್ತಮಮಾಸದಲ್ಲಿ ಮಾಡಲ್ಪಡುವ ದಾನ ಕೋಟಿಪಟ್ಟು ಹೆಚ್ಚಿನ ಫಲವನ್ನು ನೀಡುತ್ತದೆ ಎಂದು ನಾರದರಿಗೆ ನಾರಾಯಣ ತಿಳಿಸುತ್ತಾನೆ -

**“ದಾನಾನಿ ಪಿತೃಕಾರ್ಯಾಣಿ**
**ತಪಾಂಸಿ ವಿವಿಧಾನಿ ಚ ।**
**ತಾನಿ ಕೋಟಿಗುಣಾನ್ಯೇವ**
**ಸಂಪ್ರಾಪ್ತೇ ಪುರುಷೋತ್ತಮೇ”**

## ಅಪೂಪದಾನ

ಅಪೂಪ ಎನ್ನುವ ಶಬ್ದಕ್ಕೆ ಹಿಟ್ಟಿನಿಂದ ತಯಾರಿಸಿದ ಮೆಲ್ಲಲು ಮೃದುವಾದ ಮತ್ತು ಸವಿಯಲು ಸಿಹಿಯಾದ ಭಕ್ಷ್ಯ ಎಂದಷ್ಟೇ ಅರ್ಥ. ಆದರೆ, ಅತಿರಸ ಅಥವಾ ಗಾರಿಗೆ ಎನ್ನುವ ಪದಾರ್ಥವನ್ನು ಇಂದು ಅಪೂಪ ಎನ್ನುವ ಶಬ್ದದಿಂದ ವ್ಯವಹರಿಸುತ್ತಾರೆ. ವಸ್ತುತಃ, ಯಾವುದೇ ಹಿಟ್ಟಿನಿಂದ ತಯಾರಿಸಿದ ಸಿಹಿಯಾದ ಭಕ್ಷ್ಯವನ್ನು ಅಪೂಪ ಎಂದು ಕರೆಯಬಹುದು.

ಅಪೂಪದಲ್ಲಿ ಎಷ್ಟು ರಂಧ್ರಗಳಿರುತ್ತವೆಯೋ ಅಷ್ಟು ಕಾಲ ಅವನಿಗೆ ವಿಶೇಷಸುಖ ದೊರೆಯುತ್ತದೆ ಎಂದು ಶಾಸ್ತ್ರಗಳಲ್ಲಿ ಹೇಳಿರುವದರಿಂದ ಅದು ಅತಿರಸವೇ ಎಂದು ವಾದಿಸುವವರಿದ್ದಾರೆ. ಅದು ತಪ್ಪು. ಹಿಟ್ಟಿನಿಂದ ಯಾವುದೇ ಪದಾರ್ಥವನ್ನು ಮಾಡಿ ಅದನ್ನು ತುಪ್ಪದಲ್ಲಿ ಅಥವಾ ಎಣ್ಣೆಯಲ್ಲಿ ಕರಿದಾಗ ರಂಧ್ರಗಳುಂಟಾಗಿಯೇ ಉಂಟಾಗುತ್ತವೆ. ಹೀಗಾಗಿ ಅತಿರಸವನ್ನೇ ಅಪೂಪ ಎನ್ನುವ ಶಬ್ದದಿಂದ ಕರೆಯಬೇಕು ಎನ್ನುವ ವಾದದಲ್ಲಿ

ಹುರುಳಿಲ್ಲ. ಅತಿರಸವೂ ಅಪೂಪವೇ. ಅತಿರಸವೊಂದೇ ಅಪೂಪವಲ್ಲ.

ವಸ್ತುತಃ, ಅಪೂಪ, ಅಂದರೆ ಹಿಟ್ಟಿನಿಂದ ತಯಾರಿಸಿದ ಮೃದು ಸಿಹಿ ಭಕ್ಷ್ಯವನ್ನು ಅಧಿಕಮಾಸದಲ್ಲಿ ವಿಧಾನ ಮಾಡಲು ಬಲವಾದ ಕಾರಣವಿದೆ. ಪುರುಷೋತ್ತಮಮಾಸದ ವ್ರತಗಳು ಅತಿಯಾದ ಹಣದ ಖರ್ಚಿನಿಂದ ಮಾಡಬೇಕಾದ ವ್ರತಗಳಲ್ಲ. ಹಣವಿದ್ದವರು ಹಣವನ್ನು ಸಾಧನೆಗಾಗಿ ಬಳಸಲೇ ಬೇಕು, ಆದರೆ,  ಅಶ್ವಮೇಧ ರಾಜಸೂಯಗಳಂತೆ ಕೇವಲ ಹಣವಿದ್ದವರು ಮಾತ್ರ ಅಧಿಕಮಾಸದ ವ್ರತಾನುಷ್ಠಾನ ಮಾಡಬಹುದು ಎಂದಲ್ಲ. ಇದು ಬಡವರೂ, ನಿಷ್ಕಿಂಚನರೂ ಸುಲಭವಾಗಿ ಅನುಷ್ಠಾನ ಮಾಡಬಹುದಾದ ಧರ್ಮ.

ಅಕ್ಕಿಯನ್ನು ನೆನೆಸಿ, ಕುಟ್ಟಿ ಹಿಟ್ಟನ್ನು ಮಾಡಿ ಆ ಹಿಟ್ಟಿಗೆ ಬೆಲ್ಲ ಕೊಬ್ಬರಿ, ಸ್ವಲ್ಪ ಎಳ್ಳು ಇವಿಷ್ಟನ್ನು ಸೇರಿಸಿ ತುಪ್ಪದಲ್ಲಿಯೋ ಎಣ್ಣೆಯಲ್ಲಿಯೋ ಕರಿದರೆ ರುಚಿಯಾದ ಅತಿರಸ ಸಿದ್ಧ. ಅದನ್ನು ತಯಾರಿಸಲಿಕ್ಕೆ ವಿಶೇಷವಾಗಿ ಅಡುಗೆಯವರನ್ನು

ಕರೆಸಬೇಕಾಗಿಲ್ಲ. ಬಹಳ ಮೂಲ್ಯದ ಪದಾರ್ಥಗಳನ್ನು ಕೊಂಡು ತರಬೇಕಾಗಿಲ್ಲ. ಮನೆಯಲ್ಲಿಯೇ ನಿತ್ಯ ಬಳಸುವ ಪದಾರ್ಥಗಳಿಂದಲೇ ಅದನ್ನು ನಿರಾಯಾಸವಾಗಿ ತಯಾರಿಸಬಹುದು. ( ಅಧಿಕಮಾಸದ ದಾನಗಳು ಈ ಉಪನ್ಯಾಸದಲ್ಲಿ ಇದರ ಕುರಿತು ಮತ್ತಷ್ಟು ವಿಷಯಗಳಿವೆ. ಕೇಳಿ)

ಹೀಗೆ ಸುಲಭವಾಗಿ ಬಡವರ ಕೈಗೆಟಕುತ್ತದೆ ಎನ್ನುವದರಿಂದಲೇ ಇದನ್ನು ಮಾಡಿ ದಾನ ಮಾಡಬೇಕು ಎಂದು ಶಾಸ್ತ್ರಗಳು ವಿಧಿಸಿದವು. ಒಂದು ಹಿಡಿ ಒಣ ಅವಲಕ್ಕಿಗೇ ಒಲಿದ ಗೋಪಾಲಕೃಷ್ಣ, ಭಕ್ತಿಯಿಂದ ಅಪೂಪವನ್ನು ಮಾಡಿ ದಾನ ಮಾಡಿದರೆ ಒಲಿಯುವದಿಲ್ಲವೇ? ಅವನ ಕಾರುಣ್ಯದ ಒಂದು ಮುಖವಷ್ಟೇ ಇದು.

ವಸ್ತುತಃ, ಅಪೂಪವಷ್ಟೇ ಅಲ್ಲ, ತನ್ನ ಯೋಗ್ಯತೆಗೆ ಏನನ್ನು ಮಾಡಿ ದಾನ ಮಾಡಲು ಶಕ್ಯವೋ ಆ ಎಲ್ಲ ಭಕ್ಷ್ಯಗಳನ್ನು ಮಾಡಿ ಬ್ರಾಹ್ಮಣರಿಗೆ ದಾನ ಮಾಡಬೇಕು. **"ಅಶ್ನಾತ್ಯನಂತಃ ಖಲು ತತ್ವಕೋವಿದೈಃ"** ಭಗವತ್‌ತತ್ವವನ್ನು ತಿಳಿದ

ಜನರಿಗೆ ಅದನ್ನು ಸಮರ್ಪಿಸಿದಾಗ, ಅವರು ನಮ್ಮ ಮೇಲಿನ ಪ್ರೇಮದಿಂದ ಅದನ್ನು ಮೆದ್ದರೆ ಸ್ವಯಂ ಭಗವಂತ ಅವರಲ್ಲಿ ನಿಂತು ತಾನುಂಡು ನಮ್ಮನ್ನು ಅನುಗ್ರಹಿಸುತ್ತಾನೆ.

## ದಾನ ಮಾಡುವ ಸಾಮರ್ಥ್ಯ ಕಿಂಚಿತ್ತೂ ಇಲ್ಲವಾದಾಗ

ಇನ್ನು, ಯಾವ ಪದಾರ್ಥವನ್ನೂ ಮಾಡಿ ನೀಡುವ ಶಕ್ತಿಯಿಲ್ಲ ಎಂದರೆ, ಚಿಂತೆಯಿಲ್ಲ. ಪದ್ಮಾಸನ ಹಾಕಿ ಕಣ್ಣು ಮುಚ್ಚಿ ಕುಳಿತು ಪರಮಾತ್ಮನ ಮೂವತ್ಮೂರು ರೂಪಗಳನ್ನು ಮನಸ್ಸಿನಲ್ಲಿ ಧೇನಿಸಿ, ಅದ್ಭುತವಾದ ಭಕ್ಷ್ಯಗಳನ್ನು ಮನಸ್ಸಿನಲ್ಲಿಯೇ ನಿರ್ಮಿಸಿ, ಎಲೆಗೆ ಬಡಿಸಿದಂತೆ ಭಾವಿಸಿ, “ಉಣ್ಣು ಸ್ವಾಮಿ!” ಎಂದರೆ ಪರಮಾತ್ಮ ಬ್ರಾಹ್ಮಣರಲ್ಲಿ ನಿಂತು ಸ್ವೀಕರಿಸಿದ್ದಿಕ್ಕಿಂತಲೂ ಹೆಚ್ಚಾಗಿ ಪ್ರೀತನಾಗಿ ಸ್ವೀಕರಿಸುತ್ತಾನೆ. ಇಷ್ಟೇ, ಈ ರೀತಿಯಾಗಿ ಮಾನಸಪೂಜೆಯನ್ನು ಮಾಡಲು ಖಂಡುಗಖಂಡುಗದಷ್ಟು ಭಕ್ತಿ ನಮ್ಮಲ್ಲಿರಬೇಕು.

ಇನ್ನು, ಮಹಾಪ್ರಯತ್ನಗಳಿಂದ ಕನಿಷ್ಠ 33 ಅಪೂಪಗಳನ್ನು ಸಿದ್ಧ ಪಡಿಸಿ, ಅಷ್ಟ ವಸುಗಳು, ಏಕಾದಶ ರುದ್ರರು, ದ್ವಾದಶ ಆದಿತ್ಯರು, ಭಾರತೀಶನ ಮತ್ತು ಭಗವಂತನ 33 ರೂಪಗಳನ್ನು ಚಿಂತಿಸಿ ಬ್ರಾಹ್ಮಣರಿಗೆ ದಾನ ನೀಡಬೇಕು. ದಾನದ ಸಂಪೂರ್ಣ ವಿಧಿಯನ್ನು ಮುಂದಿನ ಲೇಖನದಲ್ಲಿ ಪ್ರಕಟಿಸುತ್ತೇನೆ.

## ಅಪೂಪದಾನದ ಕುರಿತು ತಿರಸ್ಕಾರ ಬೇಡ

> **“ಮಂತ್ರೈರೇತೈಶ್ಚ ಯೋ ದದ್ಯಾತ್**
> **ತ್ರಯಸ್ತ್ರಿಂಶದಪೂಪಕಮ್ ।**
> **ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ**
> **ಪುತ್ರಪೌತ್ರಾದಿಸಂತತಿಮ್”**

ಪುರುಷೋತ್ತಮನ ಕಾರುಣ್ಯ ಎಷ್ಟು ಹಿರಿದಾದದ್ದು ಎಂದರೆ ಅತೀ ಕಡಿಮೆ ಖರ್ಚಿನಿಂದ ತಯಾರಿಸಬಹುದಾದ ಈ ಅಪೂಪವನ್ನು ಸಿದ್ಧಪಡಿಸಿ, ಅವನ 33 ರೂಪಗಳನ್ನು ಅವುಗಳಲ್ಲಿ ಚಿಂತಿಸಿ ಬ್ರಾಹ್ಮಣರಿಗೆ ಮಂತ್ರಪುರಸ್ಸರವಾಗಿ ನೀಡಿದರೆ ಪರಮಾತ್ಮ ವೈಷ್ಣವರಾದ ಮಕ್ಕಳು

ಮೊಮ್ಮಕ್ಕಳು ಮರಿಮಕ್ಕಳನ್ನು ನೀಡುತ್ತಾನೆ, ಅಷ್ಟೇ ಅಲ್ಲ ಅವರ ಕಾಲದವರೆಗೆ ಹಿಂಗದ ಮಹೈಶ್ವರ್ಯವನ್ನು ದಯಪಾಲಿಸುತ್ತಾನೆ. ‘ಇದೇನು ಅಪೂಪದಾನ’ ಎಂದು ತಿರಸ್ಕಾರ ಮಾಡುವವರಿಗೆ ಬೆಳಗಾದರೆ ತಿರಿದುಂಬುವ ಬವಣೆಯನ್ನು, ಮಾತು ಕೇಳದೆ ಮಲೆತು ನಡೆವ ಹೆಂಡತಿ ಮಕ್ಕಳನ್ನು ನೀಡಿಬಿಡುತ್ತಾನೆ. **“ದದ್ಯಾದೇವಾಪೂಜಿತೋ ದುಃಖಮೇವ”** ಕಾರಣ, ಶಾಸ್ತ್ರದ ಯಾವ ವಿಧಾನವೂ ವ್ಯರ್ಥವಲ್ಲ.

**ನಿಜ, ಅಪೂಪದಾನ ಎನ್ನುವದು  ವಿದ್ಯಾದಾನ ಅಭಯದಾನಗಳಷ್ಟು ದೊಡ್ಡದಲ್ಲ. ಭೂದಾನ, ಹಿರಣ್ಯದಾನದಷ್ಟು ಬೆಲೆಯುಳ್ಳದ್ದಲ್ಲ. ಆದರೆ, ಬಡತನದ ಬೇಗೆಯಲ್ಲಿ ಬೆಂದು ಬಳಲಿ ಹೋಗುತ್ತಿರುವ ಭಕ್ತನಿಗೆ ಪರಮಾತ್ಮ ತೋರಿದ ದಾರಿ. ಶ್ರೀಕೃಷ್ಣನಿಗೆ ನೀಡಲು ಏನಾದರೂ ನೀಡು ಎಂದು ಸುದಾಮ ಹೆಂಡತಿಯನ್ನು ಕೇಳಿದರೆ, ಅವಳು ಹತ್ತು ಜನರ ಮನೆಗೆ ಹೋಗಿ ಮೂರು ಹಿಡಿ ಅವಲಕ್ಕಿಯನ್ನು ತಂದಳು. ಪರಮಾತ್ಮ ಅದನ್ನೇ ಮೆದ್ದ. ಅವನು ತಂದ ಒಣ ಅವಲಕ್ಕಿ ಅಮೃತಕ್ಕಿಂತ ಸಿಹಿಯಾದದ್ದು ಎಂದಲ್ಲ,**

**ಗೆಳೆಯನಾದ ಪರಮಾತ್ಮನಿಗೆ ಏನನ್ನಾದರೂ ನೀಡಬೇಕು, ಬರಿಗೈಲಿ ಹೋಗಬಾರದು, ಎನ್ನುವ ಸುದಾಮನ ಭಕ್ತಿಪೂರ್ಣ ಬಯಕೆ ಹಿರಿದಾದದ್ದು ಎಂದು.**

ಹಾಗೆಯೇ, ಸುಲಭಸಾಧ್ಯವಾದ ಅಪೂಪವನ್ನೂ ಮಾಡಲು ಸಾಧ್ಯವಿಲ್ಲದಷ್ಟು ಬಡತನವಿದ್ದಾಗ, ಸುದಾಮನ ಹೆಂಡತಿ ಮಾಡಿದ ಹಾಗೆ, ಹತ್ತಾರು ಜನರ ಮನೆಯಲ್ಲಿ ತಿರಿದಾದರೂ ಸರಿ, ಪದಾರ್ಥಗಳನ್ನು ತಂದು ಅಪೂಪವನ್ನು ಮಾಡಿ ಭಕ್ತಿಯಿಂದ ಬ್ರಾಹ್ಮಣರಿಗೆ ನೀಡಿದಲ್ಲಿ ಪರಮಾತ್ಮ ಸುದಾಮನಿಗೆ ಒಲಿದ ಹಾಗೆಯೇ ನಮಗೊಲಿಯುತ್ತಾನೆ. ಸಂಶಯವಿಲ್ಲ.

**ಬೊಗಸೆಯಷ್ಟು ಕರ್ಮಗಳಿಗೊಲಿದು,**
**ತೃಣಪ್ರಾಯವಾದ ಜ್ಞಾನಕ್ಕೊಲಿದು,**
**ಬಿಂದುಸಮವಾದ ಭಕ್ತಿಗೆ ಒಲಿದು**
**ಅನಂತಾನಂತಕಾಲೀನವಾದ ಮೋಕ್ಷವನ್ನೇ**
**ದಯಪಾಲಿಸುವ ಕರುಣಾಳುವಿಗೆ ಇದು**
**ಅಸಾಧ್ಯವೇ ?**

## ದಾನ ಮಾಡುವ ಮುನ್ನ ಕೆಲವು ಎಚ್ಚರಗಳು

ಮತ್ತೆರಡು ಮಾತನ್ನು ಅಪೂಪದಾನದ ಸಂದರ್ಭದಲ್ಲಿ ಹೇಳಬೇಕು. ಯಾರಾದರೂ ಅಪೂಪದಾನವನ್ನು ಕುರಿತು ತಿರಸ್ಕಾರದಿಂದ ಮಾತನಾಡಿದರೆ, ಅವರ ಜತೆಯಲ್ಲಿ ಸಂಪರ್ಕವನ್ನೇ ತೊರೆದು ಬಿಡಿ. ಕಾರಣ, ಅವರು ಪರಮಾತ್ಮನ ಕಾರುಣ್ಯವನ್ನು ಲೇವಡಿ ಮಾಡುತ್ತಿದ್ದಾರೆ. ಯಾವುದೇ ಬ್ರಾಹ್ಮಣ ಅಪೂಪದಾನವನ್ನು ಅವಜ್ಞೆಯಿಂದ ತೆಗೆದುಕೊಳ್ಳುತ್ತಿದ್ದರೆ ಆತನನ್ನೂ ಹತ್ತಿರ ಸೇರಿಸಬೇಡಿ, ಕಾರಣ, ಅವನು ಭಗವಂತನ ಆಜ್ಞೆಯನ್ನೇ ಮೀರುತ್ತಿದ್ದಾನೆ. ಬಂಗಾರ ದಾನ ಕೊಟ್ಟರೆ ಆದರದಿಂದ, ಅಪೂಪ ದಾನಕೊಟ್ಟರೆ ಅಸಡ್ಡೆಯಿಂದ ತೆಗೆದುಕೊಂಡರೆ ಅವನು ದಾನಾರ್ಹನೇ ಅಲ್ಲ. **“ಅಸಂತುಷ್ಟೋ ದ್ವಿಜೋ ನಷ್ಟಃ”** ಅವನ ಬ್ರಾಹ್ಮಣ್ಯಕ್ಕೇ ಅದರಿಂದ ಕುಂದುಂಟಾಗುತ್ತದೆ.

ಇನ್ನು, ಸಾಯಂಕಾಲದ ಪ್ರವಚನದ ಸಮಯದಲ್ಲಿಯೋ, ಅಥವಾ, ಯಾವುದಾದರೂ ಒಂದು ಸಂದರ್ಭದಲ್ಲಿ ಒಬ್ಬ ಹಿರಿಯ

ಪಂಡಿತರೋ, ಅಥವಾ ಸ್ವಾಮಿಗಳೋ ಬಂದಿದ್ದಾಗ ಅವರೊಬ್ಬರಿಗೇ ಎಲ್ಲರೂ ಅಪೂಪದಾನವನ್ನು ಮಾಡಲು ಮುಂದಾಗಬೇಡಿ. ಅದು ಕ್ರಮವೇ ಅಲ್ಲ. ಇರುವ ಬುದ್ಧಿಯನ್ನು ಸ್ವಲ್ಪವಾದರೂ ಉಪಯೋಗಿಸದಿದ್ದರೆ ಹೇಗೆ ?

ದಾನ ಮಾಡುತ್ತಿರುವದು ಭಕ್ಷ್ಯವನ್ನು. ದಾನ ಸ್ವೀಕರಿಸಿದ ವ್ಯಕ್ತಿ ಅದನ್ನು ತಿಂದಾಗ ಮಾತ್ರ ನಿಮಗೆ ಫಲ ದೊರೆಯುತ್ತದೆ. ಒಬ್ಬನೇ ಬ್ರಾಹ್ಮಣ 33 ಸಿಹಿಯ ಅಪೂಪಗಳನ್ನು ತಿನ್ನಲು ಸಾಧ್ಯವಾಗುವದಿಲ್ಲ. ಅಂಥಾದ್ದರಲ್ಲಿ ನೂರಾರು ಜನ ಬಂದು ಅಪೂಪಗಳನ್ನು ನೀಡಿದರೆ ಅವನಾದರೂ ಏನು ಮಾಡಲು ಸಾಧ್ಯ ? ಮತ್ತು, ಇಂದಿನ ದಿವಸದಲ್ಲಿ ಕೆಲವೇ ಅನಾಚಾರಿ ಪಂಡಿತರನ್ನು ಬಿಟ್ಟರೆ ತುಂಬ ಜನ ಬ್ರಾಹ್ಮಣರು ಮಡಿ ಮೈಲಿಗೆಯನ್ನು ಪಾಲಿಸುತ್ತಾರೆ. ಹೀಗಾಗಿ ನೀವು ಮನೆಯಿಂದ ಪ್ರವಚನಮಂದಿರಗಳಿಗೆ ಮಠಗಳಿಗೆ ತೆಗೆದುಕೊಂಡು ಹೋಗಿ ಅಪೂಪಗಳನ್ನು ಕೊಟ್ಟರೆ ಅವರು ತಿನ್ನುವದಿಲ್ಲ. ಅನಿವಾರ್ಯವಾಗಿ ಅವರು ಅದನ್ನು ಬೇರೆಯವರಿಗೆ ನೀಡಲೇ ಬೇಕು. ಹೀಗಾಗಿ ಮಾಡಿದ ದಾನ ವ್ಯರ್ಥ.

ಅದರ ಬದಲು, ಒಂದು ವಿದ್ಯಾಪೀಠಕ್ಕೆ ಹೋಗಿ. ಒಬ್ಬರು, ಇಬ್ಬರು, ಮೂವರು ವಿದ್ಯಾರ್ಥಿಗಳಿಂದ ಆರಂಭ ಮಾಡಿಕೊಂಡು ನೂರಾರು ವಿದ್ಯಾರ್ಥಿಗಳು ಶಾಸ್ತ್ರಾಭ್ಯಾಸ ಮಾಡುತ್ತಿರುವ ವಿದ್ಯಾಲಯಗಳು, ವಿದ್ಯಾಪೀಠಗಳು ನಮ್ಮಲ್ಲಿವೆ.

ಒಬ್ಬನೇ ವಿದ್ಯಾರ್ಥಿಯಿದ್ದರೆ, ಒಂದೇ ದಿವಸ 33 ಪದಾರ್ಥಗಳನ್ನು ಮಾಡಿ ಅದನ್ನು ಅವನು ತಿನ್ನಬೇಕು ಎಂದು ಅಪೇಕ್ಷಿಸಬೇಡಿ. ಸಾಧ್ಯವಿಲ್ಲ. ಅದು. ಅವರಿಗೆ ಇಡಿಯ ತಿಂಗಳಿಗಾಗುವಷ್ಟು ಪದಾರ್ಥವನ್ನು ನೀಡಿ ಬನ್ನಿ. ಮೂವರಿದ್ದರೆ ಹನ್ನೊಂದು ದಿವಸಗಳಿಗಾಗುವಷ್ಟು ನೀಡಿ ಬನ್ನಿ. 33 ಜನರಿದ್ದರೆ ಅವರಿಗೆ ಹೊಟ್ಟೆ ತುಂಬುವಷ್ಟು ಅವರಪೇಕ್ಷಿಸುವ ಭಕ್ಷ್ಯವನ್ನು ಒಂದೇ ದಿವಸ ಮಾಡಿಸಿ ಬಡಿಸಿ. ಅತಿರಸವನ್ನೇ ದಾನ ನೀಡಬೇಕು ಎಂದು ವಾದಕ್ಕೆ ಕೂಡಬೇಡಿ. ತಿನ್ನುವ ವ್ಯಕ್ತಿ ಅಪೇಕ್ಷಿಸುವ ಭಕ್ಷ್ಯವನ್ನು, ಅದು ಸಿಹಿಯಾದದ್ದಾಗಿರಬಹುದು, ಖಾರದ್ದಾಗಿರಬಹುದು ಅದನ್ನು ನೀಡಿ. ಅವರು ಅದನ್ನು ತಿಂದು ತೃಪ್ತರಾದರೆ ಪರಮಾತ್ಮ

ನಿಶ್ಚಿತವಾಗಿ ತೃಪ್ತನಾಗುತ್ತಾನೆ. ಅಪೂಪ ಅತ್ಯಂತ ಸುಲಭಸಾಧ್ಯವಾದ ಪದಾರ್ಥ ಎಂದು ಶಾಸ್ತ್ರದಲ್ಲಿ ಉಲ್ಲೇಖಗೊಂಡಿದೆಯಷ್ಟೆ. ನಮ್ಮ ಆರ್ಥಿಕ ಯೋಗ್ಯತೆಗೆ ಅನುಸಾರವಾಗಿ ಯಾವುದೇ ವಿಹಿತ ಭಕ್ಷ್ಯವನ್ನು ದಾನ ನೀಡಬಹುದು.

ಅಷ್ಟೇ ಅಲ್ಲ. ತೀರ ತಿಳುವಳಿಕೆಯಿಲ್ಲದಿದ್ದರೂ, ಸಜ್ಜನನಾದ ಒಬ್ಬ ಬಡಬ್ರಾಹ್ಮಣನನ್ನು ಗುರುತಿಸಿಕೊಳ್ಳಿ. ಅವನ ಮನೆಗೆ ಒಂದು ತಿಂಗಳಿಗಾಗುವಷ್ಟು, ಅಥವಾ, ಹದಿನೈದು ದಿವಸಗಳಿಗಾಗುವಷ್ಟು, ಅಥವಾ ಒಂದೊಪ್ಪತ್ತಿಗಾಗುವಷ್ಟು, ಅಥವಾ ನಿಮಗೆ ಶಕ್ತಿಯಿರುವಷ್ಟು ದವಸ ಧಾನ್ಯಗಳನ್ನು ನೀಡಿ. ಭಗವಂತ ನಿಶ್ಚಿತವಾಗಿ ತೃಪ್ತನಾಗುತ್ತಾನೆ. ಸಂಶಯವಿಲ್ಲ.

ಅದು ಬಿಟ್ಟು, ತುಲಾಭಾರ ಮಾಡುವಷ್ಟು ಅಪೂಪಗಳನ್ನು ಸಾರ್ವಜನಿಕ ಸಮಾರಂಭವೆಂಬಂತೆ ಒಬ್ಬನೇ ಪಂಡಿತನಿಗೆ **“ಅಧಿಕಸ್ಯ ಅಧಿಕಂ ಫಲಮ್”** ಎನ್ನುತ್ತಾ ದಾನ ಮಾಡಬೇಡಿ.

ಅಪೂಪ ಇದು, ಕಂಡ ಕಂಡಲ್ಲಿ, ಹೊತ್ತಲ್ಲದ ಹೊತ್ತಲ್ಲಿ ದಾನ ಮಾಡುವ ಪದಾರ್ಥವಲ್ಲ. ತಿನ್ನಲಿಕ್ಕಾಗಿ ನೀಡುವ ಪದಾರ್ಥವದು. ಕೊಂಡವನು ಹಸಿದಿರಬೇಕು. ತಿನ್ನುವ ಸಮಯವಾಗಿರಬೇಕು. ಬ್ರಾಹ್ಮಣರು ತಿನ್ನಲು ಯೋಗ್ಯವಾಗುವಂತೆ ಶುದ್ಧವಾಗಿ ತಯಾರಿಸಲ್ಪಟ್ಟಿರಬೇಕು. ಪರಮಾತ್ಮನ 33 ರೂಪಗಳಿಗೆ ಅವನ್ನು ಸಮರ್ಪಿಸಿರಬೇಕು. 33 ದೇವತೆಗಳಿಗೆ ಅವರ ಅಂತರ್ಯಾಮಿಗೆ ತರ್ಪಣ ನೀಡಿರಬೇಕು.  ಆ 33 ರೂಪಗಳ ಚಿಂತನೆಯೊಂದಿಗೆ ದಾನ ನೀಡಬೇಕು. ಆಗ ನೀಡಿದರೆ ಅದಕ್ಕೆ ಫಲ. ಇಲ್ಲದಿದ್ದಲ್ಲಿ ಬರಿಯ ಆಯಾಸವಷ್ಟೇ. **“ಶ್ರಮ ಏವ ಹಿ ಕೇವಲಮ್”**

## ಮರೆಯಬಾರದ ಒಂದು ಮಾತು.

ಅಧಿಕಮಾಸದ ಅಭಿಮಾನಿದೇವತೆ ಎಲ್ಲರಿಂದ ತಿರಸ್ಕೃತನಾಗಿ, “ಮಲ” ಎಂದು ಅವಮಾನಿತನಾಗಿ ಸಾಯಲು ಸಿದ್ಧವಾಗಿದ್ದಾಗ ಹಿರಿಯ ದೇವತೆಗಳು ಅವನನ್ನು ಸಂತೈಸಿ

ವೈಕುಂಠದ ಶ್ರೀಹರಿಯ ಬಳಿಯಲ್ಲಿ ಕೊಟ್ಟು ಕಳುಹಿಸುತ್ತಾರೆ. ಭಗವಂತನ ಬಳಿ ಹೋಗಿ ತನ್ನ ದುಃಖವನ್ನು ತೋಡಿಕೊಂಡಾಗ, ಕರುಣಾಳುವಾದ ಭಗವಂತ ಅವನನ್ನು ಗೋಲೋಕದಲ್ಲಿರುವ ತನ್ನ ಪುರುಷೋತ್ತಮ ಶ್ರೀಕೃಷ್ಣರೂಪದ ಬಳಿ ಕರೆದುಕೊಂಡು ಹೋಗಿ ಆ ರೂಪದಿಂದ ಅವನಿಗೆ ಅನುಗ್ರಹ ಮಾಡುತ್ತಾನೆ. ಹನ್ನೆರಡು ಮಾಸಗಳ ಅಭಿಮಾನಿ ದೇವತೆಗಳಿಂದಲೂ ಅವಮಾನಿತನಾದ ನೀನು ಆ ಹನ್ನೆರಡೂ ದೇವತೆಗಳಿಗೆ ಒಡೆಯನಾಗು ಎಂದು ಭಗವಂತ ವರವನ್ನು ನೀಡುತ್ತಾನೆ. ಮತ್ತು ಯಾವ ಕಾಲದಲ್ಲಿ ಮಾಡಿದರೂ ಪಡೆಯಲಾಗದಷ್ಟು ಫಲಗಳನ್ನು ನಿನ್ನ ಕಾಲದಲ್ಲಿ ಮಾಡುವ ಸ್ವಲ್ಪಕರ್ಮಗಳಿಂದಲೇ ಸಾಧಕರು ಪಡೆಯುತ್ತಾರೆ ಎಂದು ಅನುಗ್ರಹಿಸುತ್ತಾನೆ[1].

ಆದರೆ ಆ ಫಲವನ್ನು ಪಡೆಯಲಿಕ್ಕೆ ಯೋಗ್ಯವಾದ ವಿಷ್ಣುಭಕ್ತಿ ನಮ್ಮಲ್ಲಿರಬೇಕು. ದಾನವನ್ನು

---

[1] ಅಧಿಕಮಾಸದ ಕುರಿತ ಪ್ರವಚನಗಳಲ್ಲಿ ಈ ಕಥೆ ವಿಸ್ತೃತವಾಗಿ ನಿರೂಪಿತವಾಗಿದೆ. ಈ ಲೇಖನದ ಕಡೆಯಲ್ಲಿ ಪ್ರವಚನ ಲಿಂಕುಗಳನ್ನು ನೀಡಿದ್ದೇನೆ.

ತೆಗೆದುಕೊಳ್ಳುವ ವ್ಯಕ್ತಿಯಲ್ಲಿ ನಮಗಿಂತಲೂ ಮಿಗಿಲಾಗಿ ಹರಿಭಕ್ತಿ ಮನೆ ಮಾಡಿರಬೇಕು. ಸುಮ್ಮನೆ ಯಾಂತ್ರಿಕವಾಗಿ, ಅಥವಾ ಲೋಭದಿಂದ ಮಾಡಿದರೆ ಉಪಯೋಗವಿಲ್ಲ. ಮಾಡದಿರುವದೇ ಒಳಿತು. ಹಣ ಉಳಿಯುತ್ತದೆ. ಇದನ್ನು ಇಷ್ಟು ಕಟುವಾಗಿ ಹೇಳಲಿಕ್ಕೆ ಕಾರಣ, ಶ್ರೀಮದಾಚಾರ್ಯರ ತಮ್ಮಂದಿರಾದ ಮಹಾಜ್ಞಾನಿವರ್ಯರಾದ ಶ್ರೀವಿಷ್ಣುತೀರ್ಥರ ಮಾತು —

**“ನ ಲಭ್ಯತೇ ವಿಷ್ಣುಭಕ್ತೇಃ**
**ಹೀನತ್ವಾದ್ ದಾತೃಭುಂಜತೋಃ”**

**ದಾನ ನೀಡುವವನಲ್ಲಿ ಮತ್ತು ತೆಗೆದುಕೊಳ್ಳುವವನಲ್ಲಿ ವಿಷ್ಣುಭಕ್ತಿ ಶ್ರದ್ಧೆ ಜ್ಞಾನಗಳು ಇಲ್ಲವಾದಲ್ಲಿ ಶಾಸ್ತ್ರೋಕ್ತವಾದ ಫಲ ದೊರೆಯುವದಿಲ್ಲ.**

ಕೊಡುವ ದಾನವನ್ನು ನೀಡುತ್ತಿರುವವನು ಭಗವಂತ, ಸ್ವೀಕರಿಸುವ ದಾನವನ್ನು ತೆಗೆದುಕೊಳ್ಳುತ್ತಿರುವವನು ಭಗವಂತ, ಪದಾರ್ಥಗಳ ಒಳಗಿರುವವನು ಭಗವಂತ. ಅವನು

ಸತ್ಯಸಂಧ. ಅವನ ವಾಕ್ಯ ಎಂದಿಗೂ ಸುಳ್ಳಾದದ್ದಲ್ಲ, ಅತ್ಯಲ್ಪವಾದ ಸಾಧನದಿಂದಲೇ ಮಹತ್ತರವಾದ ಫಲವನ್ನು ನೀಡುವ ಮಹಾಸಾಮರ್ಥ್ಯದ ಕರುಣಾಳು ಅವನು, ಅವನ ಆಟವಿದು ಎಂಬ ಶ್ರದ್ಧಾಪೂರ್ವಕವಾದ ಜ್ಞಾನ ಮತ್ತು ನಿಶ್ಚಲವಾದ ಭಕ್ತಿ ಇವಿದ್ದರೆ ಮಾತ್ರ ನೀಡುವ ಯಾವುದೇ ದಾನವೂ ಫಲಪ್ರದವಾಗುತ್ತದೆ.

## ದೀಪದಾನ

ಪುರುಷೋತ್ತಮಮಾಸದಲ್ಲಿ ವಿಹಿತವಾದ ಪ್ರತಿಯೊಂದು ವ್ರತ, ಪ್ರತಿಯೊಂದು ದಾನ "ಸುಲಭನೋ ಹರಿ, ಸುಲಭನೋ ಹರಿ" ಎಂದು ಪರಮಾತ್ಮನ ಕಾರುಣ್ಯವನ್ನು ಸಾರಿ ಸಾರಿ ಹೇಳುತ್ತವೆ.

> "ಕರ್ತವ್ಯಂ ದೀಪದಾನಂ ಚ
> ಪುರುಷೋತ್ತಮತುಷ್ಟಯೇ ।
> ತೇನ ತೇ ತೀವ್ರದಾರಿದ್ರ್ಯಂ
> ಸಮೂಲಂ ನಾಶಮೇಷ್ಯತಿ"

ಶಕ್ತಿಯಿದ್ದಲ್ಲಿ ಬಂಗಾರದ್ದು, ಬೆಳ್ಳಿಯದ್ದು ಇಲ್ಲದಿದ್ದಲ್ಲಿ ತಾಮ್ರದ್ದಾದರೂ ದೀಪಗಳನ್ನು ಮಾಡಿಸಿ, ಅವುಗಳಲ್ಲಿ ತುಪ್ಪವನ್ನು ಹಾಕಿ, ಅಗ್ನಿಯನ್ನು ಬೆಳಗಿಸಿ, ಬೃಹನ್ನಾರದೀಯ ಪುರಾಣದಲ್ಲಿ ಹೇಳಿರುವಂತೆ, ಗೋಲೋಕದಲ್ಲಿರುವ ಪರಮಾತ್ಮನ ಜ್ಯೋತೀರೂಪವನ್ನು ಚಿಂತಿಸಿ (ಉಪನ್ಯಾಸದಲ್ಲಿ ಇದರ ವಿಸ್ತೃತ ವಿವರಣೆಯಿದೆ, ಗಮನಿಸಿ)  ನಿತ್ಯದಲ್ಲಿ ಪರಮಾತ್ಮನ ಪೂಜೆಯನ್ನು ಮಾಡುವ ಬ್ರಾಹ್ಮಣರಿಗೆ ದಾನವನ್ನಾಗಿ ನೀಡಬೇಕು. ಅತ್ಯಂತ ತೀವ್ರವಾದ ದಾರಿದ್ರ್ಯವೂ ದೀಪದಾನದಿಂದ ವಿನಾಶವಾಗುತ್ತದೆ. ನಿಶ್ಚಿತವಾಗಿ ಸಂಪತ್ತಿನ ಅಭಿವೃದ್ಧಿಯಾಗುತ್ತದೆ.

ಇದ್ದ ಸಂಪತ್ತನ್ನೆಲ್ಲ ಕಳೆದುಕೊಂಡು, ಬಂಧುಗಳಿಗಿಂದಲೂ ತಿರಸ್ಕೃತರಾಗಿ ಕಾಡುಪಾಲಾಗಿದ್ದ ಮಣಿಗ್ರೀವ ಮತ್ತು ಸುಂದರೀ ಎಂಬ ದಂಪತಿಗಳು ಉಗ್ರದೇವ ಎನ್ನುವ ಬ್ರಾಹ್ಮಣೋತ್ತಮನಿಂದ ಈ ದೀಪದಾನದ ಮಹತ್ತ್ವವನ್ನು ಪಡೆದು, ಅವನಿಂದ ಉಪದಿಷ್ಟರಾಗಿ ಪುರುಷೋತ್ತಮಮಾಸದಲ್ಲಿ ಪರಮಾತ್ಮನ ಮುಂದೆ ಒಂದು ತಿಂಗಳು ಅಖಂಡದೀಪವನ್ನು ಬೆಳಗಿಸಿ

ಅದನ್ನು ಬ್ರಾಹ್ಮಣರಿಗೆ ದಾನ ನೀಡುತ್ತಾರೆ. ಅದರ ಫಲವಾಗಿ ಭೂರಿ ಸಂಪತ್ತನ್ನು ಪಡೆಯುತ್ತಾರೆ, ಮುಂದಿನ ಜನ್ಮದಲ್ಲಿ ಚಿತ್ರಬಾಹು ಮತ್ತು ಚಂದ್ರಕಲಾ ಎಂಬ ಹೆಸರಿನಿಂದ ಮಹಾರಾಜಪದವಿಯನ್ನು ಪಡೆಯುತ್ತಾರೆ, ಅಷ್ಟೇ ಅಲ್ಲ ಆ ಜನ್ಮದಲ್ಲಿ ಅಗಸ್ತ್ಯರನ್ನು ಗುರುಗಳನ್ನಾಗಿ ಪಡೆದು ಅವರಿಂದ ಜ್ಞಾನೋಪದೇಶವನ್ನು ಪಡೆಯುತ್ತಾರೆ. (ಉಪನ್ಯಾಸದಲ್ಲಿ ಕಥೆ ಪೂರ್ಣವಾಗಿ ನಿರೂಪಿತವಾಗಿದೆ.)

ಬದರಿಕಾಶ್ರಮದಲ್ಲಿರುವ ನಾರಾಯಣ ರೂಪಿಯಾದ ಪರಮಾತ್ಮ ನಾರದರಿಗೆ ಹೇಳಿದ ಕಥೆಯಿದು. ದೀಪದಾನ ಸ್ವಯಂ ಅತ್ಯಂತ ಮಹತ್ತ್ವದ್ದು. ಪೂಜೆ ಮಾಡುವಾಗ ಪರಮಾತ್ಮನ ಮುಂದೆ ದೀಪವನ್ನು ಬೆಳಗಿಸುವದು, ನಂದಾದೀಪವನ್ನು ನಂದದ ಹಾಗೆ ದೇವರ ಮನೆಯಲ್ಲಿ ಉರಿಸುವದು, ಗುರುಗಳ ಸನ್ನಿಯಲ್ಲಿ ದೀಪವನ್ನು ಹಚ್ಚುವದು, ಜ್ಞಾನಪ್ರದ ಎಂದು ಶಾಸ್ತ್ರಗಳು ತಿಳಿಸುತ್ತವೆ.
**"ದೀಪಸಂಯೋಜನಾದ್ ಜ್ಞಾನಂ ಪುತ್ರಲಾಭೋ ಭವೇದ್ ಧ್ರುವಮ್"** ಎಂದು ಶ್ರೀರಾಯರ

ವೃಂದಾವನದ ಮುಂದೆ ಹಚ್ಚುವ ದೀಪ ಜ್ಞಾನವನ್ನೂ , ವೈಷ್ಣವರಾದ ಮಕ್ಕಳನ್ನೂ ಕರುಣಿಸುತ್ತವೆ ಎಂದು ಅಪ್ಪಣ್ಣಾಚಾರ್ಯರು ರಾಯರಸ್ತೋತ್ರದಲ್ಲಿ ಹೇಳುತ್ತಾರೆ.

ಪುರುಷೋತ್ತಮಮಾಸದಲ್ಲಿ ಮಾಡಲ್ಪಡುವ ದೀಪದಾನವಂತೂ ಅತೀ ಹೆಚ್ಚಿನ ಫಲವನ್ನು ನೀಡುತ್ತದೆ ಎಂದು ಅಗಸ್ತ್ಯರು ಹೇಳುತ್ತಾರೆ -

> “ತದಿದಂ ದೀಪದಾನಂ ಹಿ
> ರಮಾವೃದ್ಧಿಕರಂ ನೃಣಾಮ್ ॥
> ಧನಧಾನ್ಯಪಶುವ್ರಾತ-
> ಪುತ್ರಪೌತ್ರಯಶಸ್ಕರಮ್ ।

ದೀಪದಾನವನ್ನು ಮಾಡುವದರಿಂದ ಮನಸ್ಸಿನಲ್ಲಿ ಜ್ಞಾನದ ಅಭಿವೃದ್ಧಿಯಾಗುತ್ತದೆ. ಮನೆಯಲ್ಲಿ ಧನದ ಅಭಿವೃದ್ಧಿಯಾಗುತ್ತದೆ. ಕಣಜದಲ್ಲಿ ಧಾನ್ಯಗಳು ವಿಪುಲವಾಗುತ್ತವೆ. ಕೊಟ್ಟಿಗೆಯಲ್ಲಿ ಪಶುಗಳು ಸಮೃದ್ಧವಾಗಿ ಬದುಕುತ್ತವೆ. ವಂಶದಲ್ಲಿ ಪುತ್ರ ಪೌತ್ರರ ಅಭಿವೃದ್ಧಿಯಾಗುತ್ತದೆ. ಲೋಕದಲ್ಲಿ ಅದ್ಭುತವಾದ ಯಶಸ್ಸುಂಟಾಗುತ್ತದೆ.

**ವಂಧ್ಯಾವಂಧ್ಯತ್ವಶಮನ-**
**ಮವೈಧವ್ಯಕರಂ ಸ್ತ್ರಿಯಾಃ ।**
**ರಾಜ್ಯದಂ ರಾಜ್ಯಭ್ರಷ್ಟಸ್ಯ**
**ಚಿಂತಿತಾರ್ಥಕರಂ ನೃಣಾಮ್ ।**

ಮಕ್ಕಳಿಲ್ಲದವರು ಭಕ್ತಿಯಿಂದ ದೀಪದಾನ ಮಾಡಿದರೆ ಮಕ್ಕಳಾಗದಿರಲು ಕಾರಣವಾದ ದೋಷ ನಿವೃತ್ತಿಯಾಗುತ್ತದೆ.

ಮುತ್ತೈದೆಯರು ವಿಶ್ವಾಸಪೂರ್ವಕವಾಗಿ ದೀಪದಾನ ಮಾಡಿದಲ್ಲಿ ವೈಧವ್ಯದ ಭಯ ದೂರವಾಗುತ್ತದೆ.

ರಾಜ್ಯ ಕಳೆದುಕೊಂಡವರು ಮತ್ತೆ ರಾಜ್ಯ ಪಡೆಯುತ್ತಾರೆ. ಅಪೇಕ್ಷಿಸಿದ್ದೆಲ್ಲವೂ ದೊರೆಯುತ್ತದೆ.

ಆಸ್ತಿ, ಗೌರವಗಳನ್ನು ಕಳೆದುಕೊಂಡ ವ್ಯಕ್ತಿ ಅವನ್ನು ಮತ್ತೆ ಪಡೆಯುವ ಅಪೇಕ್ಷೆಯಿಂದ ಪಾರ್ಥಸಾರಥಿರೂಪವನ್ನು ನೆನೆದು ದೀಪದಾನವನ್ನು ಮಾಡಿದಲ್ಲಿ ಮತ್ತೆ ಅವನ್ನು ಪಡೆಯುತ್ತಾನೆ.  ರಾಜಸೂಯಯಾಗದ ಸಂದರ್ಭದಲ್ಲಿ ಪಡೆದಿದ್ದ ಭೂಮಂಡಲ

ಆಪತ್ಯವನ್ನೇ ಕಳೆದುಕೊಂಡಿದ್ದ ಪಾಂಡವರಿಗೆ ಮತ್ತೆ ಅದನ್ನು ಅನುಗ್ರಹಿಸಿದ ಅವನಿಗಿದು ಅಸಾಧ್ಯವೇ ?

**ಕನ್ಯಾ ವಿಂದೇತ ಭರ್ತಾರಂ**
**ಗುಣಿನಂ ಚಿರಜೀವಿನಮ್ ।**
**ಕಾಂತಾರ್ಥೀ ಲಭತೇ ಕಾಂತಾಂ**
**ಸುಶೀಲಾಂ ಚ ಪತಿವ್ರತಾಮ್ ॥**

ಕನ್ನಿಕೆಯರು ಶ್ರೀಕೃಷ್ಣನ ಸ್ಮರಣೆಯೊಂದಿಗೆ ದೀಪದಾನವನ್ನು ಮಾಡಿದಲ್ಲಿ, ಬಹುಕಾಲ ಬದುಕುವ, ಪ್ರೇಮವಾತ್ಸಲ್ಯದ ಮೂರ್ತಿಯಾದ ಗಂಡನನ್ನು ಪಡೆಯುತ್ತಾರೆ.

ಮದುವೆಯಾಗದ ಬ್ರಹ್ಮಚಾರಿ ಲಕ್ಷ್ಮೀನಾರಾಯಣರನ್ನು ಚಿಂತಿಸಿ ದೀಪದಾನವನ್ನು ಮಾಡಿದಲ್ಲಿ ಸುರೂಪಳಾದ, ಸುಶೀಲಳಾದ, ಗುಣವತಿಯಾದ ಹೆಂಡತಿಯನ್ನು ಪಡೆಯುತ್ತಾನೆ.

ಮನೆಯಲ್ಲಿ ಭೂರಿಹಣವಿರಬೇಕು ಎಂದು ಕೋಶದಷ್ಟು ಸಂಪತ್ತನ್ನು ಅಪೇಕ್ಷಿಸುವ ವ್ಯಕ್ತಿ

ಭಕ್ತಿಯಿಂದ ದ್ವಾರಕಾನಿವಾಸಿಯನ್ನು ನೆನೆಸಿ ದಾನ ನೀಡಿದಲ್ಲಿ ತನಗೆ ಯೋಗ್ಯವಾದ ಸಂಪತ್ತನ್ನು ಪಡೆಯುತ್ತಾನೆ.

**ವಿದ್ಯಾರ್ಥೀ ಲಭತೇ ವಿದ್ಯಾಂ**
**ಸುಸಿದ್ಧಿಂ ಸಿದ್ಧಿಕಾಮುಕಃ।**
**ಕೋಶಕಾಮೋ ಲಭೇತ್ ಕೋಶಂ**
**ಮೋಕ್ಷಾರ್ಥೀ ಮೋಕ್ಷಮಾಪ್ನುಯಾತ್"**

ಕಲಿಯುತ್ತಿರುವ ವಿದ್ಯೆ ತಲೆಗೆ ಹತ್ತುತ್ತಿಲ್ಲ, ದಡ್ಡತನ ಮನೆ ಮಾಡಿದೆ ಎಂದು ಚಿಂತೆಗೊಳಗಾಗಿರುವ ವಿದ್ಯಾರ್ಥಿ ಗೀತಾಚಾರ್ಯನನ್ನು ನೆನೆದು ದೀಪದಾನವನ್ನು ಮಾಡಿದರೆ ವಿದ್ಯೆಯನ್ನು ಪಡೆಯುತ್ತಾನೆ.

ಮಂತ್ರಸಿದ್ಧಿಯನ್ನು ಅಪೇಕ್ಷಿಸುವ ಸಾಧಕ ಸರ್ವಸಿದ್ಧಿಪ್ರದನನ್ನು ಸಮಂತ್ರಕವಾಗಿ ಸ್ಮರಿಸಿ ದೀಪದಾನವನ್ನು ಮಾಡಿದಲ್ಲಿ ಸಿದ್ಧಿಯನ್ನು ಗಳಿಸುತ್ತಾನೆ.

ಈ ಹಣ, ಈ ಹೆಣ್ಣಿನಿಂದ ನನಗೇನಾಗಬೇಕು, ಭಗವಂತ ನನಗೆ ಬೇಕು, ಅವನ ಭಕ್ತಿ ಬೇಕು, ಅವನ ಜ್ಞಾನ ಬೇಕು, ಅವನಿರುವ ಮೋಕ್ಷದಲ್ಲಿ ನಾನಿರಬೇಕು ಎಂದು ಬಯಸುವ ಮುಮುಕ್ಷು ದೀಪದಾನವನ್ನು ಮುಕುಂದನನ್ನು ನೆನೆಸಿ ಮಾಡಿದರೆ ಮೋಕ್ಷವನ್ನೇ ಪಡೆದು ಬಿಡುತ್ತಾನೆ.

ಆದ್ದರಿಂದ ಸುಲಭಸಾಧ್ಯವಾದ ದೀಪದಾನವನ್ನು ಅವಶ್ಯವಾಗಿ ಪ್ರತಿಯೊಬ್ಬರೂ ಮಾಡಬೇಕು.

## ದೇವರ ಹಾವು ಏಣಿ ಆಟ

ಶ್ರೀ ಸ್ಮೃತಿಮುಕ್ತಾವಲಿ ಕೃಷ್ಣಾಚಾರ್ಯರು ಕಾರುಣ್ಯದಿಂದ ಒತ್ತುಕೊಟ್ಟು ಹೇಳಿರುವ ವಿಷಯ ಯಾವಾಗಲೂ ಮನಸ್ಸಿನಲ್ಲಿರಬೇಕು.

ಅಧಿಕಮಾಸದಲ್ಲಿ ಸರ್ವಥಾ ಸಕಾಮ ಕರ್ಮಗಳನ್ನು ಮಾಡಬಾರದು **“ಸ ಚಾಧಿಮಾಸಕಃ ಪ್ರೋಕ್ತಃ ಕಾಮ್ಯಕರ್ಮಸು ಗರ್ಹಿತಃ”** ಎಂದು ಶ್ರೀ ಕೃಷ್ಣಾಚಾರ್ಯರು ಪ್ರತಿಪಾದಿಸಿದ್ದಾರೆ. ಹೀಗಾಗಿ ಯಾವುದೇ ರೀತಿಯ ಲೌಕಿಕ ಅಪೇಕ್ಷೆಯನ್ನಿಟ್ಟುಕೊಂಡು ದಾನ ಮಾಡತಕ್ಕದ್ದಲ್ಲ.

ರಾಧಾಪುರುಷೋತ್ತಮ ಪ್ರೀತನಾಗಲಿ ಎಂದು ದಾನ ಮಾಡಿದರೆ ಮೇಲಿನ ಎಲ್ಲವೂ ದೊರೆಯುತ್ತದೆ.

ಶ್ರೀ ವಿದ್ಯಾಪ್ರಸನ್ನತೀರ್ಥಶ್ರೀಪಾದಂಗಳವರು ಈ ತತ್ವವನ್ನು ತುಂಬ ಚನ್ನಾಗಿ ಮನಗಾಣಿಸುತ್ತಾರೆ —

**ಬೇಡ ಎನ್ನುವವರಿಗೆ ನೀಡುವ ದೊರೆ ನೀನು**
**ರೂಢಿಯ ಬಲ್ಲೆನೋ ಕಾಡುವದಿಲ್ಲವೋ ।**
**ನೀಡಿದ ಭಾಗ್ಯವು ಕೇಡು ತಾರದೆ ಕಾ**
**ಪಾಡಬೇಕೆಲೋ ಪ್ರೌಢಪ್ರಸನ್ನನೆ ।।**

ನಿಷ್ಕಾಮವಾಗಿ ಕರ್ಮಗಳನ್ನು ಆಚರಿಸುವವರಿಗೆ ದೇವರು ಸಕಲವನ್ನೂ ನೀಡುತ್ತಾನೆ. ಬೇಡಿದವರಿಗೆ ಬೇಡಿದಷ್ಟನ್ನು ಮಾತ್ರ ನೀಡುತ್ತಾನೆ.
ಅಧಿಕಮಾಸದಲ್ಲಿ ಸಕಾಮ ಕರ್ಮವನ್ನು ಸರ್ವಥಾ ಮಾಡುವಂತಿಲ್ಲ. ಹೀಗಾಗಿ ಯಾವುದೇ ಲೌಕಿಕ ಅಪೇಕ್ಷೆಯಿಂದ ದಾನವನ್ನು ಮಾಡುವದು ಬೇಡ. ಶಾಸ್ತ್ರದಲ್ಲೇ ಹೇಳಿದ್ದಾರಲ್ಲ ಎಂದರೆ, ಅದೇ ದೇವರ ಆಟ.

ಅಧಿಕಮಾಸದಲ್ಲಿ ಸಕಾಮ ಕರ್ಮಗಳನ್ನು ಮಾಡಬಾರದು ಎಂದು ವಿಧಾನ ಮಾಡುತ್ತಾನೆ. ಈ ದಾನಕ್ಕೆ ಇಂತಹ ಫಲ ಎಂದು ಆಸೆಯನ್ನೂ ತೋರಿಸುತ್ತಾನೆ. ಆಸೆಗೆ ಬಲಿಯಾಗದೆ ಅವನ ಆದೇಶದಂತೆ ನಿಷ್ಕಾಮವಾಗಿ ಕರ್ಮಾಚರಣೆ ಮಾಡಿದರೆ ಅನಂತ ಫಲವನ್ನು ಕರುಣಿಸುತ್ತಾನೆ. ಆಸೆಗೆ ಬಲಿಯಾಗಿ, ದೇವರ ಆದೇಶವನ್ನು ಮೀರಿದರೆ ಫಲವನ್ನು ಕಳೆದುಕೊಳ್ಳುತ್ತೇವೆ.

ಹೀಗಾಗಿ ದೀಪ ಮುಂತಾದವುಗಳ ದಾನದಿಂದ ಮಹತ್ತರ ಲೌಕಿಕ ಫಲಗಳು ಉಂಟಾಗಿಯೇ ಉಂಟಾಗುತ್ತವೆ. ಬಯಸದೇ ಇರುವದೇ ಅದನ್ನು ಪಡೆಯುವ ಮಾರ್ಗ. ನಮ್ಮ ಮನಸ್ಸಿನ ಮೇಲೆ ನಮಗೆಷ್ಟು ನಿಗ್ರಹವಿದೆ ಎಂದು ಪರೀಕ್ಷಿಸುವ ಮಾರ್ಗ.

## ಶ್ರೀಮದ್ಭಾಗವತದಾನ

ಪುರುಷೋತ್ತಮಮಾಸಗಳಲ್ಲಿ ಮಾಡುವ ಎಲ್ಲ ದಾನಗಳಿಗಿಂತಲೂ ಸರ್ವೋತ್ತಮವಾದ ದಾನ ಸಚ್ಛಾಸ್ತ್ರಗಳ ಗ್ರಂಥಗಳ ದಾನ.

ಪರಮಾತ್ಮ ಗರುಡನಿಗೆ ಉಪದೇಶಿಸುವ ಸಂದರ್ಭದಲ್ಲಿ ತತ್ವಜ್ಞಾನವನ್ನು ಪಡೆಯುವ ಮಾರ್ಗಗಳನ್ನು ಉಪದೇಶಿಸುವಾಗ, ಪುಸ್ತಕದಾನ ತತ್ವಜ್ಞಾನವನ್ನು ಪಡೆಯಲು ಶ್ರೇಷ್ಠವಾದ ಮಾರ್ಗ ಎಂದು ತಿಳಿಸುತ್ತಾನೆ. ವೇದಗಳ ಪುಸ್ತಕವನ್ನು ದಾನ ಮಾಡಿದರೆ ವೈದಿಕವಾದ ಜ್ಞಾನವನ್ನು ಪಡೆಯುತ್ತಾನೆ ಎಂದು.
ಪುರುಷೋತ್ತಮಮಾಸದಲ್ಲಿ ವಿಶೇಷವಾಗಿ ಗ್ರಂಥದಾನವನ್ನು ಭಗವಂತ ವಿಸುತ್ತಾನೆ. ಅದರಲ್ಲಿಯೂ ಶ್ರೀಮದ್ ಭಾಗವತದ ದಾನವನ್ನು.

**"ಶ್ರೀಮದ್ ಭಾಗವತಂ ದದ್ಯಾದ್**
**ವೈಷ್ಣವಾಯ ದ್ವಿಜನ್ಮನೇ ।**
**ಶಕ್ತಿಶ್ಚೇನ್ನ ವಿಲಂಬೇತ**
**ಚಲಮಾಯುರ್ವಿಚಾರಯನ್"**

ಶ್ರೀಮದ್ ಭಾಗವತದ ಪುಸ್ತಕವನ್ನು ವಿಷ್ಣುಭಕ್ತನಾದ ಬ್ರಾಹ್ಮಣನಿಗೆ ದಾನವನ್ನು ನೀಡಬೇಕು. ನೀಡುವ ಶಕ್ತಿಯಿದ್ದಾಗ ಸರ್ವಥಾ ವಿಲಂಬ ಮಾಡಬಾರದು.

ನೀರ ಮೇಲಿನ ಗುಳ್ಳೆಯಲ್ಲವೇ ಮನುಷ್ಯನ ಆಯುಷ್ಯ ?

**“ಶ್ರೀಮದ್ಭಾಗವತಂ ಸಾಕ್ಷಾದ್**
**ಭಗವದ್ರೂಪಮದ್ಭುತಮ್ ।**
**ಯೋ ದದ್ಯಾತ್ ವೈಷ್ಣವಾಯೈವ**
**ಪಂಡಿತಾಯ ದ್ವಿಜನ್ಮನೇ ।**

**ಸ ಕೋಟಿಕುಲಮುದ್ಧೃತ್ಯ**
**ಹ್ಯಪ್ಸರೋಗಣಸೇವಿತಃ ।**
**ವಿಮಾನಮರುಹ್ಯೈತಿ**
**ಗೋಲೋಕಂ ಯೋಗಿದುರ್ಲಭಮ್”**

ಕಾರಣ, ಶ್ರೀಮದ್ಭಾಗವತ ಪರಮಾತ್ಮನ ಸಾಕ್ಷಾತ್ ಸನ್ನಿಧಾನವನ್ನು ಹೊತ್ತ ಪ್ರತಿಮೆ. ಶ್ರೀಮದ್ಭಾಗವತವನ್ನು ಅಧ್ಯಯನ ಮಾಡುವ ಸಾಮರ್ಥ್ಯವುಳ್ಳ ಪಂಡಿತನಾದ, ವಿಷ್ಣುಭಕ್ತನಾದ ಬ್ರಾಹ್ಮಣನಿಗೆ ಅದನ್ನು ದಾನ ನೀಡಿದವನ ಕೋಟಿ ಜನ್ಮಗಳು ಉದ್ಧೃತವಾಗುತ್ತವೆ. ಅವನ ಕುಲವೇ ಪಾವನವಾಗಿಬಿಡುತ್ತದೆ. ಯೋಗಿದುರ್ಲಭವಾದ ಮೋಕ್ಷವನ್ನು ಪಡೆಯುವ ಮಾರ್ಗ ಗ್ರಂಥದಾನ.

ಏಕೆಂದರೆ, ಗ್ರಂಥದಾನದ ಫಲವಾಗಿ ಮನುಷ್ಯ ಶಾಸ್ತ್ರಜ್ಞಾನವನ್ನು ಪಡೆಯುತ್ತಾನೆ. ಜ್ಞಾನದಿಂದ ಭಕ್ತಿ ಅಭಿವೃದ್ಧವಾಗುತ್ತದೆ. ಕ್ರಮೇಣ ಅದು ಮೋಕ್ಷಸಾಧನವಾಗುತ್ತದೆ.

“ಕನ್ಯಾದಾನಸಹಸ್ರಾಣಿ
ವಾಜಪೇಯಶತಾನಿ ಚ ।
ಸಧಾನ್ಯಕ್ಷೇತ್ರದಾನಾನಿ
ತುಲಾದಾನಾನಿ ಯಾನಿ ಚ ।

ಮಹಾದಾನಾನಿ ಯಾನ್ಯಷ್ಟೌ
ಛಂದೋದಾನಾನಿ ಯಾನಿ ಚ ।
ಶ್ರೀಭಾಗವತದಾನಸ್ಯ
ಕಲಾಂ ನಾರ್ಹಂತಿ ಷೋಡಶೀಮ್”

ಈ ಕಾರಣದಿಂದಲೇ, ಸಾವಿರ ಕನ್ಯಾದಾನಗಳೂ, ನೂರು ಅಶ್ವಮೇಧಗಳೂ, ಚನ್ನಾಗಿ ಬೆಳೆ ಬರುವ ಹೊಲಗಳ ದಾನವೂ, ಶಾಸ್ತ್ರೋಕ್ತವಾದ ಅಷ್ಟ ಮಹಾದಾನಗಳೂ ಸಹ ಶ್ರೀಮದ್ಭಾಗವತದಾನದ, ಅರ್ಥಾತ್

ಸಚ್ಛಾಸ್ತ್ರಗಳ ಗ್ರಂಥದ ದಾನದ ಹದಿನಾರನೆಯ ಒಂದಂಶಕ್ಕೂ ಸಮವಲ್ಲ.

ಕಾರಣ, ಅವೆಲ್ಲ ದಾನಗಳಿಂದ ಜ್ಞಾನಪ್ರತಿಬಂಧಕವಾದ ಪಾಪಗಳ ನಿವೃತ್ತಿಗಾಗಿ ಮನುಷ್ಯ ಏನು ಗಂಗಾದಿಸ್ನಾನ ಮುಂತಾದ ಕರ್ಮಾಚರಣೆಗಳನ್ನು ಮಾಡಬೇಕು ಆ ಗಂಗಾದಿಸ್ನಾನಗಳ ಫಲವನ್ನು ನೀಡುತ್ತವೆ. ಆದರೆ, ಗ್ರಂಥದಾನ ಸ್ವಯಂ ಜ್ಞಾನಪ್ರತಿಬಂಧಕವಾದ ಪಾಪಗಳನ್ನು ಪರಿಹರಿಸಿ ಜ್ಞಾನವನ್ನು ನೀಡುತ್ತವೆ.

**“ತಸ್ಮಾದ್ ಯತ್ನೇನ ತದ್ ದೇಯಂ**
**ವೈಷ್ಣವಾಯ ದ್ವಿಜನ್ಮನೇ ।**
**ಸಂಭೂಷ್ಯ ವಸ್ತ್ರಭೂಷಾಭಿಃ**
**ಹೇಮಸಿಂಹಾಸಿಂಹಾಸನಸ್ಥಿತಮ್”**

ಆದ್ದರಿಂದ ಪ್ರಯತ್ನಪೂರ್ವಕವಾಗಿ, ಶಾಸ್ತ್ರಾಧ್ಯಯನಶೀಲನಾದ ಬ್ರಾಹ್ಮಣನನ್ನು ಗುರುತಿಸಿಕೊಂಡು ಆತನಿಗೆ ಶಾಸ್ತ್ರಗ್ರಂಥಗಳನ್ನು ದಾನವನ್ನು ನೀಡಬೇಕು. ವಿದ್ಯಾಶೀಲನಾದ ಆ ಬ್ರಾಹ್ಮಣನನ್ನು ವಸ್ತ್ರಾದಿಗಳಿಂದ ಗೌರವಿಸಿ,

ಉತ್ತಮ ಆಸನದಲ್ಲಿ ಕುಳ್ಳಿರಿಸಿ ಭಕ್ತಿಯಿಂದ ಪುಸ್ತಕಗಳನ್ನು ಪ್ರದಾನ ಮಾಡಬೇಕು.

ಜ್ಞಾನಸ್ವರೂಪರಾದ ವೇದವ್ಯಾಸದೇವರು ಅಥವಾ ಸರ್ವಜ್ಞರಾದ ಶ್ರೀಮದಾಚಾರ್ಯರು ಅರ್ಥನಿರ್ಣಯ ಮಾಡಬೇಕಾದ ಶಾಸ್ತ್ರಗಳಲ್ಲಿ ಒಂದಾದದ್ದು, ಪುರಾಣಗಳ ಮಧ್ಯದಲ್ಲಿ ಹಿರಿದಾದದ್ದು ಶ್ರೀಮದ್ಭಾಗವತ.

ಶ್ರೀಮದ್ಭಾಗವತಕ್ಕಿಂತಲೂ ಶ್ರೇಷ್ಠವಾದವು ನಾಲ್ಕು ವೇದಗಳು ಮತ್ತು ಶ್ರೀಮನ್ಮಹಾಭಾರತ ಮಹಾಭಾರತ ಸಮಸ್ತ ನಿರ್ಣೇಯಗ್ರಂಥಗಳಲ್ಲಿ ಸರ್ವೋತ್ತಮವಾದದ್ದು. ಅದಕ್ಕೆ ಸಮವಾದ ಗ್ರಂಥ ಮತ್ತೊಂದಿಲ್ಲ. ಬ್ರಹ್ಮಸೂತ್ರಗಳು ಈ ಎಲ್ಲ ನಿರ್ಣೇಯಗ್ರಂಥಗಳನ್ನು ನಿರ್ಣಯ ಮಾಡುವ ಸರ್ವಸರ್ವೋತ್ತಮಗ್ರಂಥ. ಅದಕ್ಕೆ ಸಮನಾದ ಗ್ರಂಥವೂ ಇಲ್ಲ, ಉತ್ತಮವಾದ ಗ್ರಂಥವೂ ಇಲ್ಲ. ಹೀಗಾಗಿ ಜ್ಞಾನಿಗಳಾದ, ಅಧ್ಯಯನಶೀಲರಾದ ಬ್ರಾಹ್ಮಣರನ್ನು ಸಂಪರ್ಕಿಸಿ ಅವರಿಗೆ ಯಾವ ಗ್ರಂಥದ ಆವಶ್ಯಕತೆ ಇದೆ ಎನ್ನುವದನ್ನು

ತಿಳಿದುಕೊಂಡು ಆ ಗ್ರಂಥವನ್ನು ತಂದು ಭಕ್ತಿಪುರಸ್ಸರವಾಗಿ ದಾನ ನೀಡಬೇಕು.

ಶ್ರೀಮದಾಚಾರ್ಯರ ಗ್ರಂಥಗಳ ಒಂದಕ್ಷರವನ್ನು ಬರೆದರೆ ಗಂಗಾನದಿಯ ತೀರದಲ್ಲಿ ವಿಷ್ಣುಮಂದಿರವನ್ನು ಕಟ್ಟಿಸಿ ಪೂಜಾದಿಗಳನ್ನು ಏರ್ಪಡಿಸಿದಷ್ಟು ಪುಣ್ಯ ಒದಗುತ್ತದೆ ಎಂದು ಶ್ರೀನಾರಾಯಣಪಂಡಿತಾಚಾರ್ಯರು ತಿಳಿಸುತ್ತಾರೆ. ಇನ್ನು ಅವನ್ನು ಅಧ್ಯಯನ ಮಾಡುವ ಜನರ ಪುಣ್ಯಕ್ಕೆ ಎಣೆಯಿಲ್ಲ. ಹೀಗಾಗಿ ಆಚಾರ್ಯರ ಸರ್ವಮೂಲಗ್ರಂಥಗಳ, ಜನ್ಮಜನ್ಮಾಂತರದ ಅಜ್ಞಾನವನ್ನು ಕಳೆಯುವ ಟೀಕಾಕೃತ್ಪಾದರ ಟೀಕಾಗ್ರಂಥಗಳ, ಮಹಾವೈದುಷ್ಯವನ್ನು ನೀಡುವ ಚಂದ್ರಿಕಾಚಾರ್ಯರು ಮುಂತಾದವರ ಗ್ರಂಥಗಳ ದಾನವನ್ನು ಮಾಡುವದು ಶ್ರೇಯಸ್ಕರ, ಜ್ಞಾನಕರ, ಭಕ್ತಿಕರ, ಹೆಚ್ಚೇನು ? ಮೋಕ್ಷಕರ.

ಇಲ್ಲಿಯೂ ಒಂದು ಕಿವಿಮಾತನ್ನು ಹೇಳುವ ಆವಶ್ಯಕತೆಯಿದೆ. ಸುಮ್ಮನೆ, ಅಂಗಡಿಗೆ ಹೋಗಿ ಒಂದು ಪುಸ್ತಕವನ್ನು ಕೊಂಡು ಬಂದು ದಾನ ನೀಡಿಬಿಡಬೇಡಿ. ಮೊದಲಿಗೆ ದಾನ

ತೆಗೆದುಕೊಳ್ಳುವವರನ್ನು ಸಂಪರ್ಕಿಸಿ ಅವರಿಗೆ ಬೇಕಾದ ಗ್ರಂಥ ಯಾವುದು ಎಂದು ತಿಳಿದುಕೊಂಡು ಆ ಪುಸ್ತಕವನ್ನು ದಾನ ನೀಡಿ.

ವಸ್ತುತಃ, ವಿದ್ಯಾಶೀಲನಾದ ಪಂಡಿತನಾದ ಬ್ರಾಹ್ಮಣನಿಗೆ ಗ್ರಂಥದಾನವನ್ನು ಮಾಡುವದು ಶ್ರೇಯಸ್ಕರ ಎಂದು ಶಾಸ್ತ್ರ ಹೇಳುತ್ತದೆ. ಕಾರಣ, ಅವರಿಗೆ ನೀಡಿದಾಗ ಮಾತ್ರ ದಾನ ಪೂರ್ಣ ಫಲಪ್ರದವಾಗುತ್ತದೆ. ಸಂಶಯವಿಲ್ಲ. ನಿರಂತರ ಅಧ್ಯಯನದಲ್ಲಿ ಆಸಕ್ತನಾಗಿರುವ ವಿದ್ವಾಂಸರನ್ನು ಹುಡುಕಿಕೊಂಡು ಹೋಗಿ ದಾನ ಮಾಡಿದರಂತೂ ಪುಣ್ಯ ಅತುಲ.

ಆದರೆ, ಇವತ್ತು ಪಂಡಿತರು ಎಂದು ಹೆಸರಿನ ಹಿಂದೆ ಸೇರಿಸಿಕೊಂಡು ಅಡ್ಡಾಡುವ ಕೆಲವು ಮಂದಿ ಅಧ್ಯಯನವನ್ನು ಅವರ ಗುರುಗಳಿಗೆ ಗುರುದಕ್ಷಿಣೆಯನ್ನಾಗಿ ಕೊಟ್ಟು ಬಂದವರೆ. ಎಲ್ಲರೂ ಹೀಗಿದ್ದಾರೆ ಎಂದೇನಲ್ಲ. ಆದರ ತುಂಬ ಜನ ಹೀಗೆಯೇ ಇದ್ದಾರೆ ಎನ್ನುವದು ವಾಸ್ತವ. ಮಠಗಳಿಂದ ವಿದ್ಯಾಪೀಠಗಳಿಂದ ಹೊರಬಂದು ಜೀವನವನ್ನು ಆರಂಭಿಸಿದ ಮೇಲೆ ಅವರ

ಅಧ್ಯಯನ ನಿಂತ ನೀರಾಗಿಬಿಡುತ್ತದೆ. ಕೆಲವು ಪಂಡಿತರ ಮನೆಯಲ್ಲಿ ಪುಸ್ತಕಗಳು ಧೂಳು ತಿನ್ನುತ್ತ ಕುಳಿತಿರುವದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅಂಥಹವರಿಗೆ ಪುಸ್ತಕಗಳನ್ನು ನೀಡಿ ಮಹಾಪ್ರಯೋಜನವೇನೂ ಆಗುವದಿಲ್ಲ.

ಅದರ ಬದಲು, ವಿದ್ಯಾಪೀಠಗಳ ಅಧ್ಯಾಪಕರನ್ನು, ಅದರಲ್ಲೂ, ದೂರದೂರುಗಳಲ್ಲಿ ತಮ್ಮ ಮನೆಯನ್ನೇ ಗುರುಕುಲವನ್ನಾಗಿ ಮಾಡಿಕೊಂಡು ಪಾಠಶಾಲೆಯನ್ನು ನಡೆಸುತ್ತಿರುವ ವಿದ್ವಾಂಸರನ್ನು ಸಂಪರ್ಕಿಸಿ, ಬುದ್ಧಿವಂತರಾದ, ಕಲಿಯಲು ಆಸಕ್ತರಾಗಿರುವ, ವಿದ್ಯಾರ್ಥಿಗಳು ಯಾರಿದ್ದಾರೆ ಎಂದು ಕೇಳಿಕೊಳ್ಳಿ. ಇವತ್ತು ನೂರಕ್ಕೆ ತೊಂಬತ್ತೊಂಬತ್ತು ಜನ ವಿದ್ಯಾರ್ಥಿಗಳಿಗೆ ಹಣ ಕೊಟ್ಟು ಪುಸ್ತಕವನ್ನು ಕೊಂಡುಕೊಳ್ಳುವ ಶಕ್ತಿಯಿರುವದಿಲ್ಲ. ಆದರೆ, ಓದುವ ಉತ್ಸಾಹ ಅತ್ಯಕವಾಗಿರುತ್ತದೆ. ಅವರಿಗೆ ಆ ಸಮಯದಲ್ಲಿ ಸರಿಯಾದ ಪುಸ್ತಕ ದೊರೆತರೆ ಇನ್ನೂ ಹೆಚ್ಚು ಅಧ್ಯಯನವನ್ನು ಮಾಡಲು ಸಾಧ್ಯವಾಗುತ್ತದೆ. ಕೊಟ್ಟ ದಾನ ಸಾರ್ಥಕವಾಗುತ್ತದೆ. **ಓದು ಮರೆತ ಪಂಡಿತರ ಮನೆಯ ಕಪಾಟಿನಲ್ಲಿ ಭದ್ರವಾಗಿರುವ**

## ಪುಸ್ತಕಕ್ಕಿಂತ, ಓದುವ ವಿದ್ಯಾರ್ಥಿಯ ಕೈಯಲ್ಲಿ ಹರಿದು ಹೋಗುವ ಪುಸ್ತಕಕ್ಕೇ ಬೆಲೆ ಹೆಚ್ಚು.

ಈ ವಿಷಯಗಳನ್ನು ಭಿಢೆಯಿಲ್ಲದೆ ಹೇಳಲೇಬೇಕು. ಹೇಳದಿರುವದೇ ತಪ್ಪು. ದಾನವನ್ನು ಯೋಗ್ಯವಾದ ಕಾಲದಲ್ಲಿ, ಯೋಗ್ಯವಾದ ಸ್ಥಳದಲ್ಲಿ, ಯೋಗ್ಯವಾದ ವ್ಯಕ್ತಿಗೆ, ಯೋಗ್ಯವಾದ ಕ್ರಮದಲ್ಲಿ ಮಾಡಿದಾಗ ಮಾತ್ರ ಫಲ ದೊರೆಯುತ್ತದೆ, ಈ ನಾಲ್ಕರಲ್ಲಿ ಯಾವುದು ಒಂದಿಲ್ಲದಿದ್ದರೂ ಅದು ತಾಮಸದಾನವಾಗುತ್ತದೆ ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಉದ್ಘೋಷಿಸಿ ಹೇಳುತ್ತಾನೆ.

> **“ಅದೇಶಕಾಲೇ ಯದ್ ದಾನಂ**
> **ಅಪಾತ್ರೇಭ್ಯಶ್ಚ ದೀಯತೇ ।**
> **ಅಸತ್ಕೃತಮವಜ್ಞಾತಂ ತತ್**
> **ತಾಮಸಮುದಾಹೃತಮ್”**

ಏಕಾದಶಿಯ ದಿನ ಅನ್ನದಾನ ಮಾಡಬಾರದು, ಬಯಲಿನಲ್ಲಿ ನಿಂತು ಕನ್ಯಾದಾನವನ್ನು ಮಾಡಬಾರದು ಎಂದೆಲ್ಲ ನಿಯಮವಿರುವ ಹಾಗೆ ಗ್ರಂಥದಾನಕ್ಕೆ ವಿಶೇಷವಾದ ಕಾಲ ದೇಶಗಳ

ನಿರ್ಬಂಧವಿಲ್ಲ. ಅಧಿಕಮಾಸದಲ್ಲಿ ಮಾಡಿದಾಗ ಹೆಚ್ಚಿನ ಫಲವೇ ಹೊರತು, ವರ್ಷದ ಮುನ್ನೂರ ಅರವತ್ತು ದಿವಸಗಳೂ ಅದನ್ನು ದಾನ ಮಾಡಬಹುದು.

ಆದರೆ, ಕಾಲದೇಶಗಳಿಗಿಂತ ಮಿಗಿಲಾದದ್ದು ಪಾತ್ರತೆ. ಗ್ರಂಥದಾನವನ್ನು ಸ್ವೀಕರಿಸುವ ವ್ಯಕ್ತಿ ಅದನ್ನು ಅಧ್ಯಯನ ಮಾಡುತ್ತಾನೆಯೇ ಎನ್ನುವದನ್ನು ಖಚಿತಪಡಿಸಿಕೊಂಡೇ ಗ್ರಂಥದಾನವನ್ನು ಮಾಡಬೇಕು. ಇಲ್ಲದಿದ್ದರೆ, ಎಂಬತ್ತು ವರ್ಷದ ಮುದುಕನಿಗೆ ಹದಿನೆಂಟು ವರ್ಷದ ಮಗಳನ್ನು ಮದುವೆ ಮಾಡಿಕೊಟ್ಟರೆ ಎಷ್ಟು ಅನರ್ಥವೋ ಅದಕ್ಕಿಂತಲೂ ಹೆಚ್ಚಿನ ಅನರ್ಥ, ಬ್ರಾಹ್ಮಣನ ಬದುಕಿನ ಮಾಂಗಲ್ಯವಾದ ಅಧ್ಯಯನವನ್ನು ಬಿಟ್ಟ ಬ್ರಾಹ್ಮಣನಿಗೆ ಗ್ರಂಥದಾನವನ್ನು ಮಾಡಿದರೆ ಬರುತ್ತದೆ. ಎಚ್ಚರದಲ್ಲಿರಬೇಕು.

ಶ್ರೀಮದಾಚಾರ್ಯರ ಶಾಸ್ತ್ರದ ನಿರಂತರ ಅಧ್ಯಯನದಲ್ಲಿ ಮುಳುಗಿರುವವನೇ ನಿಜವಾದ ಸತ್ಪಾತ್ರ. ಅಂಥ ಶ್ರೇಷ್ಠ ಬ್ರಾಹ್ಮಣ ದೊರೆಯುವದೇ

ಪರ್ವಕಾಲ. ಅವನಿರುವ ಜಾಗವೇ ಪುಣ್ಯಕ್ಷೇತ್ರ. ಅಂಥ ಶ್ರೇಷ್ಠ ವಿದ್ವಾಂಸನಿಗೆ ಅಥವಾ ಅಧ್ಯಯನಾಸಕ್ತನಾದ ವಿದ್ಯಾರ್ಥಿಗೆ ದಾನ ನೀಡಬೇಕು. ಅದು ಸಾತ್ವಿಕದಾನ.

**“ದೇಶೇ ಕಾಲೇ ಚ ಪಾತ್ರೇ ಚ**
**ತದ್ ದಾನಂ ಸಾತ್ವಿಕಂ ಸ್ಮೃತಮ್”**

ಮತ್ತೂ ಒಂದು ಸುಲಭದ ಮಾರ್ಗವನ್ನು ತಿಳಿಸುತ್ತೇನೆ.

ವಿಶ್ವನಂದಿನಿಯಲ್ಲಿ ಈಗಾಗಲೇ ಶ್ರೀಮದ್ ಭಾಗವತ, ಶ್ರೀ ಮಧ್ವವಿಜಯ ಮುಂತಾದ ಗ್ರಂಥಗಳ ಪ್ರವಚನಗಳು ಪ್ರಕಟವಾಗಿವೆ. App ಮತ್ತು Website ಗಳನ್ನು ಉಪಯೋಗಿಸಲು ಬಾರದ ವೃದ್ಧರು ಅನೇಕರಿದ್ದಾರೆ.

ಎಲ್ಲ ಪ್ರವಚನಗಳಳನ್ನು ಒಂದು Pen drive ಗೆ ಹಾಕಿ, ಅಥವಾ ಒಂದು MP3 player ಗೆ ಹಾಕಿ ಅಂತಹ ವೃದ್ಧರಿಗೆ, ಆವಶ್ಯಕತೆ ಇರುವವರಿಗೆ ನೀಡಿ. ಅದು ಮಹತ್ತರ ಫಲವನ್ನು ನೀಡುತ್ತದೆ.

ಯಾವುದೇ ದಾನವನ್ನು ಮಾಡಬೇಕಾದರೂ ಶ್ರೀಹರಿ ನನ್ನಿಂದ ಮಾಡಿಸುತ್ತಿದ್ದಾನೆ, ಪದಾರ್ಥಗಳಲ್ಲಿಯೂ ಇರುವವನು ಅವನೇ, ಸ್ವೀಕರಿಸುವವರಲ್ಲಿಯೂ ಇರುವವನು ಅವನೇ, ದಾನ ಮಾಡುವ ಕ್ರಿಯೆಯಲ್ಲಿಯೂ ಇರುವವನು ಅವನೇ, ಅವನ ಭಕ್ತಿಯೇ ಕರ್ಮಕ್ಕೆ ಫಲವನ್ನು ನೀಡುವಂತದ್ದು ಎನ್ನುವ ಎಚ್ಚರ ತಪ್ಪದಿರಲಿ.

ದಾನ ಮಾಡಲು ಮನಸ್ಸಿದ್ದಾಗ ಹಣ ದೊರೆಯುವದು ಕಷ್ಟ, ಹಣವಿದ್ದಾಗ ಮನಸ್ಸು ಬರುವದು ಕಷ್ಟ, ಹಣ ಮನಸ್ಸು ಎರಡೂ ಇದ್ದಾಗ ಸ್ವೀಕರಿಸಲು ಯೋಗ್ಯ ಪಾತ್ರರು ದೊರೆಯುವದು ಇನ್ನೂ ಕಷ್ಟ. ಹಣ, ಮನಸ್ಸು, ಪಾತ್ರರು ಮೂರೂ ಇದ್ದಾಗ ದಾನ ಮಾಡುವನು ಶ್ರೀಹರಿಯ ಕರುಣಾಪಾತ್ರ ಎನ್ನುವ ಶಾಸ್ತ್ರದ ಮಾತಿನ ಎಚ್ಚರದೊಂದಿಗೆ ಉತ್ತಮ ಧರ್ಮಾಚರಣೆ ನಿಮ್ಮಿಂದ ನಡೆಯಲಿ ಎಂದು ಶ್ರೀಹರಿ ವಾಯು ದೇವತಾಗುರುಗಳನ್ನು ಪ್ರಾರ್ಥಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

## ಉಪನ್ಯಾಸಗಳ ಲಿಂಕುಗಳು

ಬೃಹನ್ನಾರದೀಯ ಪುರಾಣದಲ್ಲಿ ವಿಸ್ತೃತವಾಗಿ ಉಲ್ಲೇಖಗೊಂಡಿರುವ ಪುರುಷೋತ್ತಮಮಾಸದ ಮಾಹಾತ್ಮ್ಯದ ಅರ್ಥಾನುಸಂಧಾನದ ಪ್ರವಚನಗಳು. ಕೆಳಗಿನ ಯಾವುದೇ ಶಬ್ದವನ್ನು ಒತ್ತಿದರೂ ಆಯಾ ಉಪನ್ಯಾಸದ ಪೇಜು ತೆರೆದುಕೊಳ್ಳುತ್ತದೆ.

### 1. ಪುರುಷೋತ್ತಮ ಮಾಸದ ಪರಿಚಯ

ಅಧಿಕಮಾಸಕ್ಕೆ ನಿಯಾಮಕವಾದ ಭಗವದ್ರೂಪ ಗೋಲೋಕದ ಶ್ರೀ ಪುರುಷೋತ್ತಮ ಎನ್ನುವ ರೂಪ. ಹೀಗಾಗಿ ಈ ಮಾಸವನ್ನು ಪುರುಷೋತ್ತಮ ಮಾಸ ಎಂದು ಶಾಸ್ತ್ರಗಳು ದೊಡ್ಡವರು ಕರೆಯುತ್ತಾರೆ. ಈ ಮಾಸದ ಆವಶ್ಯಕತೆ, ಇದರ ಪರಿಚಯಗಳು ಈ ಉಪನ್ಯಾಸದಲ್ಲಿವೆ. ಪುರುಷೋತ್ತಮ ಮಾಸದ ಮಾಹಾತ್ಮ್ಯವನ್ನು ಕೇಳಲಿಕ್ಕಾಗಿ ಋಷಿಗಳ ಸಮುದಾಯವೇ ನೈಮಿಷಾರಣ್ಯಕ್ಕೆ ಧಾವಿಸಿ ಬರುತ್ತದೆ. ಈ ಮಾಹಾತ್ಮ್ಯವನ್ನು ಹೇಳಬರುವ ಸೂತಾಚಾರ್ಯರ ಅಪೂರ್ವ ವರ್ಣನೆಯೂ ಇಲ್ಲಿದೆ.

## 2. ಪುರುಷೋತ್ತಮ ಮಾಸದ ಮಾಹಾತ್ಮ್ಯ

ಭೂಲೋಕದಲ್ಲಿ ಕಷ್ಟ ಪಡುವ ಸಜ್ಜನರನ್ನು ಉದ್ಧಾರ ಮಾಡಲೆಂದೇ ಸಂಚಾರ ಮಾಡುವ, ಅಪಾರ ಕಾರುಣ್ಯದ ನಾರದರು, ಬದರಿಯ ನಾರಾಯಣನ ಬಳಿಗೆ ಬಂದು ಸಜ್ಜನರ ಕಷ್ಟಗಳನ್ನು ವಿಜ್ಞಾಪಿಸಿಕೊಂಡು ಎಲ್ಲ ಕಷ್ಟಗಳ ಪರಿಹಾರಕ್ಕಾಗಿ ಉಪಾಯವನ್ನು ಪ್ರಾರ್ಥಿಸುತ್ತಾರೆ. ಆಗ ಆ ಬದರೀನಾಥ ಪುರುಷೋತ್ತಮ ಮಾಸದ ಮಾಹಾತ್ಮ್ಯವನ್ನು ನಾರದರಿಗೆ ಉಪದೇಶಿಸುತ್ತಾನೆ. ಭಗವಂತನ ವಾಣಿಯಲ್ಲಿ ಬಂದ ಅಧಿಕ ಮಾಸದ ಮಾಹಾತ್ಮ್ಯದ ವಿವರಣೆ ಇಲ್ಲಿದೆ.

## 3. ಅಧಿಕಮಾಸದ ದೇವತೆಯ ದುಃಖ

ಎಲ್ಲ ಕರ್ಮಗಳಿಗೂ ವರ್ಜ್ಯವಾದ, ದೇಹಕ್ಕೆ ಅನವಶ್ಯಕವಾದ ಪದಾರ್ಥ ಮಲ ಎಂದು ಕರೆಸಿಕೊಳ್ಳುವಂತೆ, ಉಳಿದ ಕಾಲದದೃಷ್ಟಿಯಲ್ಲಿ ಮಲ ಮಾಸ ಎಂದು ಕರೆಸಿಕೊಳ್ಳುತ್ತಿದ್ದ ಈ ಅಧಿಕಮಾಸಕ್ಕೆ ಅಭಿಮಾನಿಯಾದ ದೇವತೆ ದುಃಖದಿಂದ ಸಂತಪ್ತನಾಗಿ ಸಾಯಲು ಸಿದ್ಧನಾಗುತ್ತಾನೆ. ಆಗ ದೇವತೆಗಳೆಲ್ಲ ಸಂತೈಸಿ ಅವನನ್ನು ವೈಕುಂಠದ ಶ್ರೀಹರಿಯ ಬಳಿಗೆ ಕಳುಹಿಸುತ್ತಾರೆ. ಅಲ್ಲಿಗೆ ಬಂದು ದುಃಖದ ನಿವೇದನೆ ಮಾಡಿಕೊಂಡ ಆ ದೇವತೆಯನ್ನು ಶ್ರೀಮನ್ನಾರಾಯಣ

ಗೋಲೋಕಕ್ಕೆ ಕರೆದುಕೊಂಡು ಹೋಗುವ, ಆ ಗೋಲೋಕದಲ್ಲಿರುವ ಶ್ರೀಕೃಷ್ಣನ ದಿವ್ಯರೂಪದ ವರ್ಣನೆಯಿರುವ ಭಾಗ.

## 4. ಪರಮಾತ್ಮ ಮಾಡಿದ ಪರಮಾನುಗ್ರಹ

ಅಧಿಕಮಾಸದ ದೇವತೆಯ ಉದ್ಧಾರಕ್ಕಾಗಿ ವೈಕುಂಠ ನಾರಾಯಣ ರೂಪದಿಂದ ಗೋಲೋಕದ ಪುರುಷೋತ್ತಮ ರೂಪಕ್ಕೆ ಸ್ವಯಂ ಭಗವಂತನೇ ವಿಜ್ಞಾಪನೆ ಮಾಡಿಕೊಳ್ಳುವ ಅಪೂರ್ವ ಪ್ರಸಂಗವನ್ನು ನಾವಿಲ್ಲಿ ಕೇಳುತ್ತೇವೆ. ಪುರುಷೋತ್ತಮರೂಪದ ಭಗವಂತ ಅಧಿಕ ಮಾಸದ ದೇವತೆಯ ಮೇಲೆ ಮಾಡುವ ಪರಮಾನುಗ್ರಹದ ಚಿತ್ರಣದೊಂದಿಗೆ.

## 5. ಅಧಿಕ ಮಾಸದ ತಿರಸ್ಕಾರದ ಫಲ

ಪುರುಷೋತ್ತಮ ಮಾಸದ ಮಾಹಾತ್ಮ್ಯವನ್ನು ತಿಳಿದ ಬಳಿಕವೂ ಅದನ್ನು ತಿರಸ್ಕಾರ ಮಾಡುವದರಿಂದ ಅದೆಂತಹ ದುಷ್ಫಲವುಂಟಾಗುತ್ತದೆ ಎನ್ನುವದನ್ನು ದ್ರೌಪದಿಯ ದೃಷ್ಟಾಂತದ ಮುಖಾಂತರ ಶ್ರೀಕೃಷ್ಣ ಪರಮಾತ್ಮ ಅರ್ಜುನನಿಗೆ ತಿಳಿಸಿ ಹೇಳುತ್ತಾನೆ. ಬ್ರಹ್ಮದೇವರ ಶಾಪದಂತೆ ಪಾರ್ವತ್ಯಾದಿ ಸ್ತ್ರೀಯರು ಹಿಂದೆ ಬ್ರಾಹ್ಮಣಕನ್ಯೆಯಾಗಿ ಹುಟ್ಟಿದ್ದಾಗ, ದುರ್ವಾಸರ

ಉಪದೇಶವನ್ನು ಪಡೆದರೂ ಅಧಿಕಮಾಸವನ್ನು ತಿರಸ್ಕಾರ ಮಾಡಿದ ಕಾರಣಕ್ಕೆ ವಸ್ತ್ರಾಪಹಾರದ ದೋಷಕ್ಕೆ ಒಳಗಾಗುತ್ತಾರೆ ಎಂಬ ಕಥೆಯ ವಿಸ್ತೃತ ನಿರೂಪಣೆ ಇಲ್ಲಿದೆ. ಶ್ರೀಮದಾಚಾರ್ಯರ ನಿರ್ಣಯಗಳ ವಿವರಣೆಯೊಂದಿಗೆ.

## 6. ಅಧಿಕಮಾಸದ ವ್ರತಗಳು

ಪುರುಷೋತ್ತಮಮಾಸದಲ್ಲಿ ಮಾಡಬೇಕಾದ ನಿತ್ಯವ್ರತಗಳು, ಉಪವಾಸದ ಮಹತ್ತ್ವ, ಉಪವಾಸದ ವ್ರತಗಳು, ಕ್ರಮಧಾನ್ಯತ್ಯಾಗವ್ರತ, ರಾತ್ರಿಭೋಜನವ್ರತ, ಭೂಮಿಶಯನವ್ರತ, ಮೌನವ್ರತ, ಅಖಂಡದೀಪವ್ರತ ಮುಂತಾದವುಗಳ ಕುರಿತ ವಿವರಣೆ ಇಲ್ಲಿದೆ.

## 7. ಅಧಿಕಮಾಸದ ದಾನಗಳು

ದಾನವನ್ನು ಮಾಡಬೇಕಾದರೆ ನಮಗಿರಬೇಕಾದ ಎಚ್ಚರಗಳು, ಮಾಡುವ ತಪ್ಪುಗಳು, ಅಪೂಪ ದಾನ, ದೀಪದಾನ, ಭಾಗವತದಾನ, ತೀರ್ಥಸ್ನಾನ, ಅಧಿಕ ಮಾಸದ ನಿತ್ಯಧರ್ಮಗಳು, ರಾಧಾಪುರುಷೋತ್ತಮಪೂಜಾ, ಭಾಗವತಶ್ರವಣ ಮುಂತಾದ ವಿಷಯಗಳ ನಿರೂಪಣೆ ಇಲ್ಲಿದೆ.

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491